# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 3-11-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## 2022 ರಲ್ಲಿ ಇಂಡೋನೇಶಿಯಾ ಕಚ್ಚಾ ಪಾಮೆಣ್ಣೆ ಉತ್ಪಾದನೆ 48.23 ಮಿಲಿಯನ್ ಟನ್

ಇಂಡೋನೇಶಿಯಾದ ಕಚ್ಚಾ ಪಾಮೆಣ್ಣೆ ಉತ್ಪಾದನೆ 2022 ರಲ್ಲಿ 48.23 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ರಫ್ತು 23.95 ಮಿಲಿಯನ್ ಟನ್‌ಗಳಾಗಬಹುದು. ಹಾಗೂ ಬಯೋ ಇಂಧನ ಬಳಕೆಗಾಗಿ 9.59 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಹಿಂದಿನ ವರ್ಷ ಇಂಡೋನೇಶಿಯಾದ ಉತ್ಪಾದನೆ 51 ಮಿಲಿಯನ್ ಟನ್‌ಗಳೆನ್ನಲಾಗಿದ್ದು ದೇಶೀ ಖಾದ್ಯ ಬಳಕೆ 9 ಮಿಲಿಯನ್ ಟನ್‌ಗಳೆನ್ನಲಾಗಿದೆ. ಮಲೇಶೀಯಾದ ಪಾಮೆಣ್ಣೆ ಉತ್ಪಾದನೆ ಹಿಂದಿನ ವರ್ಷ 18 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದ್ದು 2022 ರಲ್ಲಿ 23 ರಿಂದ 25 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದ್ದು, ಈಗ ಪ್ರತಿಕೂಲ ಹವಾಮಾನ, ಅಧಿಕ ಮಳೆಯಿಂದಾಗಿ ಉತ್ಪಾದನೆ ಇಳಿಕೆಯಾಗಬಹುದೆನ್ನಲಾಗಿದೆ.

## ಭಾರತದಿಂದ ಸಂಸ್ಕರಿತ ಕೃಷಿ ಉತ್ಪಾದನೆಗಳ ರಫ್ತು 25 ಶೇಕಡಾ ಹೆಚ್ಚಳ

ಎಪ್ರಿಲ್‌ನಿಂದ ಸೆಪ್ಟೆಂಬರ್ 2022 ರ ಅವಧಿಯಲ್ಲಿ ಭಾರತದಿಂದ ಮೌಲ್ಯವರ್ಧಿತ ಕೃಷಿ ಉತ್ಪಾದನೆಗಳ ರಫ್ತು ಹಿಂದಿನ ವರ್ಷದ ಇದೇ ಅವಧಿಯಲ್ಲಾಗಿದ್ದುದರಿಂದ 25 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. 2022–23 ಅಚಧಿಯ 23.56 ಬಿಲಿಯನ್ ಅಮೇರಿಕನ್ ಡಾಲರ್ ಗುರಿಯಲ್ಲಿ 13.77 ಬಿಲಿಯನ್ ಅಮೇರಿಕಾ ಡಾಲರ್ ರಫ್ತು ಈಗಾಗಲೇ ತಲುಪಲಾಗಿದೆಯೆನ್ನಲಾಗಿದೆ. ಬೇಳೆಕಾಳು, ಬಾಸ್ಮತಿ ಅಕ್ಕಿ, ಗೋಧಿ ಮತ್ತಿತರ ಸಂಸ್ಕರಿತ ಆಹಾರೋತ್ಪಾದನೆಗಳ ರಫ್ತು ಹಿಂದಿನ ವರ್ಷಕ್ಕಿಂತ ಗಣನೀಯ ವೃದ್ಧಿ ಕಂಡಿದೆ.

## ಖಾರೀಫ್ ಬೆಳೆಯ ನೀರುಳ್ಳಿ ಉತ್ಪಾದನೆ 13 ಶೇಕಡಾ ಇಳಿಕೆ ಸಾಧ್ಯತೆ

ಬೆಳೆ ನಾಟಿ ಪ್ರದೇಶದ ಇಳಿಕೆ ಬೆಳೆಯ ಕುಂಠಿತ ಪ್ರಗತಿ ಮತ್ತಿತರ ಕಾರಣಗಳಿಂದ ಈ ವರ್ಷದ ಖಾರೀಫ್ ಬೆಳೆಯ ನೀರುಳ್ಳಿ ಉತ್ಪಾದನೆ ಹಿಂದಿನ ವರ್ಷದ 10.8 ಮಿಲಿಯನ್ ಟನ್‌ಗಳಿಂದ 9.5 ಬಿಲಿಯನ್ ಟನ್‌ಗಳಿಗೆ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹಿಂದಿನ ರಾಬಿ ಬೆಳೆಯ ದಾಸ್ತಾನು ಸಾಕಷ್ಟಿರುವ ಹಿನ್ನಲೆಯಲ್ಲಿ ಹೆಚ್ಚಿನ ದರ ಹೆಚ್ಚಳದ ಸಾಧ್ಯತೆ ಕಡಿಮೆಯೆನ್ನಲಾಗಿದೆ.